# ರಾಜಕೀಯಕ್ಕೆ ಜೋಲಿ



**2020**ರಲ್ಲಿ ನಡೆಯಲಿರುವ ಅಮೆರಿಕದ ಅಧ್ಯಕ್ಷ ಹುದ್ದೆಗೆ ಹಾಲಿವುಡ್ ನಟಿ ಏಂಜೆಲಿನಾ ಜೋಲಿ ಕೂಡಾ ಒಬ್ಬ ಸ್ಪರ್ಧೆ ಎನ್ನುವ ಸುದ್ದಿ ಅಮೆರಿಕದ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಮುಂದಿನ ಚುನಾವಣೆಗೆ ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿಗಳ ಪಟ್ಟಿ ಈಗಾಗಲೇ ಹನುಮಂತನ ಬಾಲದಂತೆ ಬೆಳೆದಿದೆ. ಅದಕ್ಕೀಗ ಏಂಜೆಲಿನಾ ಜೋಲಿಯ ಹೆಸರೂ ಸೇರಿಕೊಂಡಿದೆ. ಬಿಬಿಸಿ4 ಕ್ಕೆ ನೀಡಿದ ಸಂದರ್ಶನದಲ್ಲಿ ಸ್ವತಃ ಜೋಲಿ, ರಾಜಕೀಯ ಸೇರುವ ಕುರಿತು ಆಸಕ್ತಿ ವ್ಯಕ್ತಪಡಿಸಿದ್ದಾಳೆ. '20 ವರ್ಷದ ಹಿಂದೆ ಈ ಕುರಿತು ಪ್ರಶ್ನೆ ಕೇಳಿದಾಗ ನಕ್ಕುಬಿಟ್ಟಿದ್ದೆ. ಆದರೆ ಈಗ ಅಲ್ಲಿ ನನ್ನ ಅಗತ್ಯವಿದೆ ಅನ್ನಿಸುತ್ತಿದೆ' ಎಂದು ಸಂದರ್ಶಕ ಜಸ್ಟಿನ್ ವೆಬ್ ಕೇಳಿದ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಿದ್ದಾಳೆ. 'ನಿಮ್ಮ ಹೆಸರನ್ನು 2020ರ ಅಧ್ಯಕ್ಷೀಯ ಸ್ಪರ್ಧಿಗಳ ಪಟ್ಟಿಯಲ್ಲಿ ಸೇರಿಸಬಹುದೆ?' ಎಂದು ಮತ್ತೆ ಕೇಳಿದಾಗ, ಆಕೆ ನಕ್ಕು 'ಥ್ಯಾಂಕ್ಯೂ' ಎಂದು ಹೇಳಿದ್ದೀಗ ದೊಡ್ಡ ಸುದ್ದಿ.

ರಿಪಬ್ಲಿಕ್ ಪಕ್ಷದ ಅಭ್ಯರ್ಥಿಯಾಗಿ ಕಳೆದ ಸಲ ಚುನಾವಣೆ ಗೆದ್ದು ಅಮೆರಿಕದ ಅಧ್ಯಕ್ಷರಾಗಿರುವ ಡೊನಾಲ್ಡ್ ಟ್ರಂಪ್, 2020ರಲ್ಲೂ ಮತ್ತೆ ಸ್ಪರ್ಧಿಸಬಹುದು. ಸದ್ಯಕ್ಕಂತೂ ಆ ಪಕ್ಷದಿಂದ ಟ್ರಂಪ್‌ಗೆ ಎದುರಾಳಿ ಯಾರು ಎನ್ನುವುದು ಸ್ಪಷ್ಟವಾಗಿಲ್ಲ. ಟ್ರಂಪ್ ಸ್ಪರ್ಧಿಸಿದರೆ ಆತನನ್ನು ಮಣಿಸಲು ಮಹಿಳೆಯಿಂದ ಮಾತ್ರ ಸಾಧ್ಯ ಎನ್ನುವುದು ಡೆಮಾಕ್ರಾಟಿಕ್ ಪಕ್ಷದ ಚಿಂತನೆ. ಹಾಗಾಗಿ ಏಂಜೆಲಿನಾ ಜೋಲಿ ಪ್ರಯತ್ನ ಮಾಡಿದರೆ, ಟ್ರಂಪ್ ವಿರುದ್ಧ ಅಭ್ಯರ್ಥಿಯಾಗುವ ಸಾಧ್ಯತೆ ಹೆಚ್ಚಿದೆ.

ಆದರೆ ಅದು ಅಷ್ಟು ಸುಲಭದ ದಾರಿಯೂ ಅಲ್ಲ. ಏಕೆಂದರೆ ಅಲ್ಲಿ ಸ್ಪರ್ಧಿಗಳಾಗಲು ಮಹಿಳೆಯರ ದೊಡ್ಡ ದಂಡೇ ಸಿದ್ಧವಾಗಿದೆ. ಅದಕ್ಕೆ ತಕ್ಕಂತೆ ಇತ್ತೀಚೆಗೆ ನಡೆದ ಆಂತರಿಕ ಸ್ಪರ್ಧೆಯಲ್ಲಿ ದಾಖಲೆ ಸಂಖ್ಯೆಯ ಮಹಿಳೆಯರು ಕಾಂಗ್ರೆಸ್ಗೆ ಆಯ್ಕೆಯಾಗಿದ್ದಾರೆ. 2016ರಲ್ಲಿ ಸೋತ ಸ್ಯಾಂಡರ್ಸ್, ಎಮಿ ಕ್ಲೋಬುಚರ್, ಕಮಲಾ ಹ್ಯಾರಿಸ್, ಕ್ರಿಸ್ಟೀನ್ ಗಿಲ್ಲಿಬ್ರಾಂಡ್ ಮತ್ತು ಹಿಲರಿ ಕ್ಲಿಂಟನ್ ಸದ್ಯಕ್ಕೆ 2020ರ ಅಧ್ಯಕ್ಷೀಯ ಚುನಾವಣೆಯ ಸ್ಪರ್ಧಿಗಳ ಪಟ್ಟಿಯಲ್ಲಿರುವ ಪ್ರಮುಖರು. ಪಟ್ಟಿಯಲ್ಲಿ ಈಗಾಗಲೆ 18ಕ್ಕೂ ಹೆಸರುಗಳಿವೆ. ಆದರೆ ಏಂಜೆಲಿನಾ ಜೋಲಿಗೆ ಹಾಲಿವುಡ್ ಖ್ಯಾತಿಯ ಬೆಂಬಲವೂ ಇರುವುದರಿಂದ ಸ್ಪರ್ಧಿಯಾಗುವ ಅವಕಾಶ ಹೆಚ್ಚಿದೆ.

43ರ ಹರೆಯದ ಜೋಲಿ, ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿಯ ರಾಯಭಾರಿಯಾಗಿ ಮತ್ತು ಲೈಂಗಿಕ ಹಿಂಸೆಯ ವಿರುದ್ಧ ಪ್ರಚಾರಕಿಯಾಗಿ ಈಗಾಗಲೆ ಸಾಕಷ್ಟು ಸಮಾಜಸೇವೆ ನಡೆಸುತ್ತಿದ್ದಾಳೆ. 'ಈ ಕೆಲಸ ನನಗೆ ಸ್ವಲ್ಪ ಮಟ್ಟಿನ ಸೂಕ್ತ ಅನುಭವವನ್ನು ನೀಡಿದೆ. ನಾನು ಸರಕಾರದ ಜೊತೆಗೆ ಕೆಲಸ ಮಾಡಿದ್ದೇನೆ. ಮಿಲಿಟರಿ ಜತೆಗೂ ಕೆಲಸ ಮಾಡಬಲ್ಲೆ' ಎನ್ನುವುದು ಸಂದರ್ಶನದಲ್ಲಿ ಜೋಲಿ ಹೇಳಿರುವ ಮಾತು. ಆದರೆ ತಕ್ಷಣಕ್ಕೆ ರಾಜಕೀಯ ಪ್ರವೇಶದ ಘೋಷಣೆಯನ್ನು ಆಕೆ ಮಾಡುತ್ತಿಲ್ಲ. 'ಸದ್ಯಕ್ಕೆ ಯಾವುದೇ ಹುದ್ದೆಗಳಿಲ್ಲದೆ ಸ್ವಲ್ಪ ಕಾಲ ನನ್ನ ಕೆಲಸವನ್ನು ತಣ್ಣಗೆ ಮುಂದುವರಿಸುತ್ತೇನೆ. ರಾಜಕೀಯಕ್ಕೆ ನಾನು ಸೂಕ್ತವೇ ಅನ್ನುವುದು ಗೊತ್ತಿಲ್ಲ. ಆದರೆ ಬದಲಾವಣೆ ತರಲು ನಾನು ಪ್ರಾಮಾಣಿಕವಾಗಿ ಶ್ರಮಿಸಬಲ್ಲೆ' ಎನ್ನುವ ಮಾತುಗಳು ಆಕೆಯಲ್ಲಿ ರಾಜಕೀಯವನ್ನು ನಿಭಾಯಿಸುವ ಸಾಮರ್ಥ್ಯ ಇದೆ ಎನ್ನುವುದನ್ನೇ ಸೂಚಿಸುವಂತಿದೆ.

2019ರಲ್ಲಿ ಮಕ್ಕಳಿಗಾಗಿ ಬಿಬಿಸಿಯ ಹೊಸ ನ್ಯೂಸ್ ಕಾರ್ಯಕ್ರಮವೊಂದು ಪ್ರಸಾರವಾಗಲಿದೆ. ಈ ಕಾರ್ಯಕ್ರಮಕ್ಕೆ ಜೋಲಿಯೇ ಕಾರ್ಯನಿರ್ವಹಕ ನಿರ್ಮಾಪಕಿ. ಜಗತ್ತಿನ ವಿವಿಧ ದೇಶಗಳ ಯುವಜನರಿಗೆ ಪರಸ್ಪರ ಸಂಪರ್ಕ ಸಾಧಿಸಲು, ಸುದ್ದಿಗಳನ್ನು ಅರ್ಥ ಮಾಡಿಕೊಳ್ಳಲು ಇದು ನೆರವಾಗಲಿದೆ ಎನ್ನುವುದು ಆಕೆಯ ಮಾತು.

ಗಂಡ ಬ್ರಾಡ್ ಪಿಟ್‌ನಿಂದ 2016ರ ಕೊನೆಯಲ್ಲಿ ಡೈವೋರ್ಸ್‌ಗೆ ಅರ್ಜಿ ಸಲ್ಲಿಸಿ ಸದ್ಯಕ್ಕೆ ಸಿಂಗಲ್ ಪೇರೆಂಟಿಂಗ್ ನಡೆಸಿರುವ ಜೋಲಿ, ಆರು ಮಕ್ಕಳ ಜೊತೆಗೆ ಲಾಸ್ ಏಂಜಲೀಸ್‌ನ 6 ಬೆಡ್ ರೂಂ 10 ಬಾತ್ ರೂಗಳಿರುವ ಮನೆಗೆ ಶಿಫ್ಟ್ ಆಗಿ ವರ್ಷ ಕಳೆದಿದೆ. ಮಕ್ಕಳ ಸಲುವಾಗಿ ಅಡುಗೆ ಮಾಡಲೂ ಕಲಿತಾಗಿದೆ. ಆಕೆ ಮತ್ತು ಗಂಡ ಬ್ರಾಡ್‌ಪಿಟ್ ವಾಸಿಸುತ್ತಿದ್ದ 2.5 ಕೋಟಿ ಡಾಲರ್ ಬೆಲೆಯ ಮನೆ ಸದ್ಯಕ್ಕೆ ಖಾಲಿ ಆಗಿದೆ. ಬಾಲ್ಯದಲ್ಲಿ ತಂದೆ ಜಾನ್ ವೈಟ್ ಜೊತೆಗೆ ನಟನೆ ಶುರು ಮಾಡಿದ ಜೋಲಿ, ಈಗ ತನ್ನ ಮಕ್ಕಳ ಆಸರೆಗೆ ತಂದೆಯ ನೆರವು ಬಯಸಿದ್ದರೂ, ಕುಟುಂಬದಿಂದ ದೂರವಾಗಿರುವ ಆತ ಒಂದೇ ಮನೆಯಲ್ಲಿ ವಾಸಿಸಲು ಒಪ್ಪಿಲ್ಲ. ಆದರೆ ಜೋಲಿ ಏಕಾಂಗಿಯಾಗಿ ಕುಟುಂಬ ನಿರ್ವಹಣೆಯ ಜೊತೆಗೆ ವಿಶ್ವಸಂಸ್ಥೆಯ ರಾಯಭಾರಿಯ ಕೆಲಸವನ್ನೂ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾಳೆ.

ನಟಿಯಾಗಿ ಜೋಲಿಯ ಸಾಧನೆ ದೊಡ್ಡದೇ. ಒಮ್ಮೆ ಅಕಾಡೆಮಿ ಪ್ರಶಸ್ತಿ, ಎರಡು ಬಾರಿ ಸ್ಕ್ರೀನ್ ಆಕ್ಟರ್ ಗಿಲ್ಡ್ ಪ್ರಶಸ್ತಿ ಮತ್ತು ಮೂರು ಸಲ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಗಳಿಸಿರುವ ಈಕೆ, ನಿರ್ಮಾಪಕಿಯಾಗಿಯೂ ಸಾಕಷ್ಟು ಯಶಸ್ವಿ ಚಿತ್ರಗಳನ್ನು ನೀಡಿದ್ದಾಳೆ. ಹಾಲಿವುಡ್‌ನ ಅತ್ಯಧಿಕ ಸಂಭಾವನೆಯ ನಟಿ ಎಂಬ ಕೀರ್ತಿಯೂ ಈಕೆಯದ್ದು.

ಜೀವನದಲ್ಲಿ ಜೋಲಿ ಸಾಕಷ್ಟು ಅನುಭವಿಸಿದ್ದಾಳೆ. 14ರ ಹರೆಯದಲ್ಲೇ ಅಮ್ಮನ ಅನುಮತಿಯೊಂದಿಗೆ ಬಾಯ್‌ಫ್ರೆಂಡ್ ಜೊತೆಗೆ ಲಿವಿಂಗ್ ಟುಗೆದರ್ ನಡೆಸಿದವಳು. 2 ವರ್ಷದ ಬಳಿಕ ಆ ಸಂಬಂಧ ಕಿತ್ತುಹೋಯಿತು. ನಟನೆಯ ಕಡೆಗೆ ಗಮನ ಕೇಂದ್ರೀಕರಿಸಿದಳು. ನಟಿಯಾಗಿ ಖ್ಯಾತಿಯ ತುತ್ತ ತುದಿಗೇರಿ, ಅಪಾರ ಸಂಪತ್ತಿನ ಒಡತಿಯಾದಳು. 1996ರಲ್ಲಿ ಮೊದಲ ಮದುವೆಯಾಗಿ 99ರಲ್ಲಿ ಡೈವೋರ್ಸ್ ಪಡೆದಳು. 2000ದಲ್ಲಿ ಎರಡನೇ ಮದುವೆಯಾದದ್ದು ಮೂರೇ ವರ್ಷದಲ್ಲಿ ಕಿತ್ತುಹೋಯಿತು. ಬಳಿಕ 11 ವರ್ಷ ಸುಮ್ಮನಿದ್ದ ಈಕೆ 2014ರಲ್ಲಿ ಬ್ರಾಡ್ಪಿಟ್‌ನನ್ನು ಮದುವೆಯಾದಳು. ಆದರೆ ಅದೂ ಸರಿಹೋಗಲಿಲ್ಲ. ಆಕೆಯೀಗ ರಾಜಕೀಯದ ಕಡೆಗೆ ಆಸಕ್ತಿ ವಹಿಸಿರುವ ಹಿನ್ನೆಲೆಯಲ್ಲಿ ಅಮೆರಿಕದ ರಾಜಕೀಯ ಸಣ್ಣದೊಂದು ಜೋಲಿ

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65